# ಕೃಷಿ ವಿಜ್ಞಾನ ಕೇಂದ್ರ

ಹಿರೇಹಳ್ಳಿ, ತುಮಕೂರು–572168

## ಭಾ.ಕೃ.ಅ.ಪ.– ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ

ಬೆಂಗಳೂರು




ಹಿರೇಹಳ್ಳಿ, ತುಮಕೂರು–572168

ದೂರವಾಣಿ ಸಂಖ್ಯೆ : 0816-2243175 ಫ್ಯಾಕ್ಸ್ ನಂ. : 0816-2243177

ಮಿಂಚಂಚೆ : iihrkvk@gmail.com ಅಂತರ್ಜಾಲ ತಾಣ : www.iihrkvk.org

## ಕೃಷಿ ವಿಜ್ಞಾನ ಕೇಂದ್ರದ ಹಿನ್ನೆಲೆ

ಕೃಷಿ ವಿಜ್ಞಾನ ಕೇಂದ್ರ (ಕೆ.ವಿ.ಕೆ) ಹಿರೇಹಳ್ಳಿಯು, ಭಾರತೀಯ ಕೃಷಿ ಅನುಸಂಧಾನ ಪರಿಷತ್, ನವದೆಹಲಿ ಇದರ ಅಡಿಯಲ್ಲಿ 24 ನೇ ಮಾರ್ಚ್ 2009 ರಂದು ಸ್ಥಾಪಿತಗೊಂಡಿರುತ್ತದೆ. ಕೆ.ವಿ.ಕೆಯು. ತುಮಕೂರಿನಿಂದ ಸುಮಾರು 10 ಕಿಲೋ. ಮೀಟರ್ (ಬೆಂಗಳೂರು–ತುಮಕೂರು ರಸ್ತೆ), ಹಿರೇಹಳ್ಳಿ ರೈಲ್ವೆ ನಿಲ್ದಾಣದ ಎದುರುಗಡೆ; ರಾಷ್ಟ್ರೀಯ ಹೆದ್ದಾರಿ–4 ಕ್ಕೆ ಹೊಂದಿಕೊಂಡಿರುತ್ತದೆ. ಕೃಷಿ ವಿಜ್ಞಾನ ಕೇಂದ್ರದ ಮುಖ್ಯ ಆದ್ಯತೆಗಳೆಂದರೆ, ತುಮಕೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಾದ ಪಾವಗಡ, ಮಧುಗಿರಿ, ಶಿರಾ, ಕೊರಟಗೆರೆ (ಮಧ್ಯ ಒಣ ವಲಯ–4) ಮತ್ತು ತುಮಕೂರು ತಾ॥ (ಪೂರ್ವ ಒಣ ವಲಯ–5) ಕೃಷಿಗೆ ಸಂಬಂಧಪಟ್ಟಂತೆ ರೈತರ ಸಮಸ್ಯೆಗಳಿಗೆ ವಿಷಯ ಪರಿಣಿತರಿಂದ ಸೂಕ್ತ ಪರಿಹಾರ ಒದಗಿಸುವುದು. ಹಿರೇಹಳ್ಳಿ ಕೇಂದ್ರೀಕೃತ ಕೆ.ವಿ.ಕೆಯು ಆಡಳಿತಾತ್ಮಕವಾಗಿ ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಬೆಂಗಳೂರು, ಇವರಿಗೆ ಒಳಪಟ್ಟಿರುತ್ತದೆ.

## ಮುಖ್ಯ ಧ್ಯೇಯೊದ್ದೇಶಗಳು

ಕೃಷಿಗೆ ಸಂಬಂಧಪಟ್ಟಂತಹ ತಂತ್ರಜ್ಞಾನವನ್ನು ಸ್ಥಳ ನಿರ್ದಿಷ್ಠ ಅಳವಡಿಕೆಗಾಗಿ ಕ್ಷೇತ್ರ ಪರೀಕ್ಷಾ ಮೌಲ್ಯಮಾಪನ ಕೈಗೊಳ್ಳುವುದು.

## ಕೃಷಿ ವಿಜ್ಞಾನ ಕೇಂದ್ರದ ಪ್ರಮುಖ ಚಟುವಟಿಕೆಗಳು

- ಸ್ಥಳ ನಿರ್ದಿಷ್ಠ ಸುಸ್ಥಿರ ಭೂಬಳಕೆಗಾಗಿ, ಕೃಷಿಗೆ ಸಂಬಂಧಪಟ್ಟ ತಂತ್ರಜ್ಞಾನವನ್ನು ರೈತರ ತಾಕುಗಳಲ್ಲಿ ಕ್ಷೇತ್ರ ಪರೀಕ್ಷೆಗೆ ಒಳಪಡಿಸುವುದು.



- ವಿವಿಧ ಬೆಳೆಗಳ ಉತ್ಪಾದನಾ ಸಾಮರ್ಥ್ಯ ತಿಳಿಯಲು ಮೂಂಚೂಣಿ ಪ್ರಾತ್ಯಕ್ಷಿಕೆಗಳನ್ನು ರೈತರ ತಾಕುಗಳಲ್ಲಿ ಏರ್ಪಡಿಸುವುದು.



- ರೈತರಿಗೆ ಮತ್ತು ಕೃಷಿ ವಿಸ್ತರಣಾ ಕಾರ್ಯಕರ್ತರ ಅವಶ್ಯಕತೆಗೆ ಅನುಸಾರವಾಗಿ ನೂತನ ಆವಿಷ್ಕಾರ ಮತ್ತು ತಂತ್ರಜ್ಞಾನಗಳ ಬಗ್ಗೆ ಸಂಬಂಧಪಟ್ಟ ವಿಷಯ ತಜ್ಞರಿಂದ ತರಬೇತಿ ಕೊಡುವುದು.



- ಜಿಲ್ಲೆಯ ಕೃಷಿ ಆರ್ಥಿಕತೆಯ ಬಲವರ್ಧನೆಗೆ ಶ್ರಮಿಸುವ ಸರ್ಕಾರಿ, ಖಾಸಗಿ ಹಾಗೂ ಸ್ವಯಂ ಪ್ರೇರಿತ ಸಂಸ್ಥೆಗಳಿಗೆ ಅಗತ್ಯವಿರುವ ಕೃಷಿ ತಂತ್ರಜ್ಞಾನಗಳ ಮಾಹಿತಿ ಮತ್ತು ಸಂಪನ್ಮೂಲ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು.
- ನೂತನ ಕೃಷಿ ತಂತ್ರಜ್ಞಾನಗಳ ಪ್ರಚಾರಕ್ಕಾಗಿ ಸೂಕ್ತ ಕೃಷಿ ವಿಸ್ತರಣಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.



- ರೈತರ ಅನುಕೂಲಕ್ಕಾಗಿ ಗುಣಮಟ್ಟದ ಬೀಜ, ಕಸಿಮಾಡಿದ ಗಿಡಗಳು, ಮತ್ತು ಜೈವಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಒದಗಿಸುವುದು.



## ಕೃಷಿ ವಿಜ್ಞಾನ ಕೇಂದ್ರ ಹಿರೇಹಳ್ಳಿಯಲ್ಲಿರುವ ಸೌಲಭ್ಯಗಳು

❖ **ಸಾಮಾನ್ಯ ಸೌಲಭ್ಯಗಳು :**

❑ **ಮೂಲಭೂತ ಸೌಕರ್ಯಗಳು/ಕಟ್ಟಡಗಳು**

ಕೃಷಿ ವಿಜ್ಞಾನ ಕೇಂದ್ರವು ಸುಸಜ್ಜಿತವಾದ ಆಡಳಿತ ಕಛೇರಿಯನ್ನು ಹೊಂದಿದ್ದು, ತರಬೇತಿ ಕೇಂದ್ರ, ಸಭಾಂಗಣ, ವಾಚನಾಲಯ ಮತ್ತು ಗಣಕಯಂತ್ರದ ಕೊಠಡಿ ಇನ್ನಿತರೆ ಆಧುನಿಕ ಸೌಲಭ್ಯಗಳನ್ನು ಹೊಂದಿರುತ್ತದೆ.



## ❑ ರೈತರ ವಸತಿ ಗೃಹ

ಕೆ.ವಿ.ಕೆ.ಯಲ್ಲಿ ವೃತ್ತಿಪರ ತರಬೇತಿ ನೀಡಲು ರೈತರಿಗೆ ಊಟ ಮತ್ತು ವಸತಿ ಪೂರೈಸಲು ಸುಸಜ್ಜಿತ ರೈತರ ವಸತಿ ಗೃಹವನ್ನು ಹೊಂದಿರುತ್ತದೆ.



## ❑ ಮಾರಾಟ ಮಳಿಗೆ

ಉತ್ತಮ ಗುಣಮಟ್ಟದ ಬೀಜ, ಕಸಿಮಾಡಿದ ಗಿಡಗಳು, ಲಘು ಪೋಷಕಾಂಶಗಳ ಮಿಶ್ರಣ ಮತ್ತು ಜೈವಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಕಡಿಮೆ ದರದಲ್ಲಿ ರೈತರಿಗೆ ಒದಗಿಸಲು ವ್ಯವಸ್ಥಿತ ಮಾರಾಟ ಮಳಿಗೆಯನ್ನು ಕೆ.ವಿ.ಕೆ ಆವರಣದಲ್ಲಿ ಕಲ್ಪಿಸಲಾಗಿದೆ.



## ❑ ಹವಮಾಪನ ಮತ್ತು ಮುನ್ಸೂಚನಾ ಕೇಂದ್ರ

ಕೆ.ವಿ.ಕೆಯು ಒಂದು ಮಾದರಿ ಕ್ಷೇತ್ರವಾಗಿದ್ದು, ದಿನನಿತ್ಯದ ಹವಮಾನ ಗುಣಲಕ್ಷಣಗಳಾದ ಉಷ್ಣಾಂಶ, ಆರ್ದ್ರತೆ, ಮಳೆ ಮತ್ತು ಮಣ್ಣಿನ ತೇವಾಂಶಗಳ ಮಾಹಿತಿಯನ್ನು ದಾಖಲಿಸುವುದು. ರೈತರಿಗೆ ಕೃಷಿ ಸಲಹೆ ಮತ್ತು ಹವಮಾನ ಮುನ್ಸೂಚನೆಯನ್ನು ಒದಗಿಸಲಾಗುವುದು.



## ❑ ಕೃಷಿ ಯಂತ್ರೋಪಕರಣಗಳ ವಿಭಾಗ

ಕೆ.ವಿ.ಕೆ ಆವರಣದಲ್ಲಿ ಪ್ರತ್ಯೇಕ ಕೃಷಿ ಯಂತ್ರೋಪಕರಣ ವಿಭಾಗವಿದ್ದು, ಟ್ರಾಕ್ಟರ್, ಪವರ್ ಟಿಲ್ಲರ್, ಹಾಗೂ ಇನ್ನಿತರ ಕೃಷಿಗೆ ಸಂಬಂಧಪಟ್ಟ ಯಂತ್ರೋಪಕರಣಗಳನ್ನು ಹೊಂದಿದ್ದು ಇವುಗಳನ್ನು ದಿನನಿತ್ಯದ ಕೃಷಿ ಚಟುವಟಿಕೆಗಳಿಗಾಗಿ ಮತ್ತು ಮಾಹಿತಿ-ಪ್ರದರ್ಶನಕ್ಕೆ ಇಡಲಾಗಿದೆ.



## ❖ ಮಾದರಿ ತೋಟಗಾರಿಕಾ ಪ್ರಾತ್ಯಕ್ಷಿಕ ಘಟಕ / ಅಧ್ಯಯನ ಕ್ಷೇತ್ರ

ನಮ್ಮ ಕೃಷಿ ವಿಜ್ಞಾನ ಕೇಂದ್ರವು, 50 ಎಕರೆ ಪ್ರದೇಶದಲ್ಲಿ ಹೊಸ ಆವಿಷ್ಕಾರಗಳನ್ನೊಳಗೊಂಡ ವಿವಿಧ ತೋಟಗಾರಿಕಾ ಬೆಳೆ ಪದ್ಧತಿಗಳ ಅಳವಡಿಕೆಗೆ ಸಂಬಂಧಿಸಿದ ಸುಮಾರು 100ಕ್ಕೂ ಅಧಿಕ 'ಮಾದರಿ ಪ್ರಾತ್ಯಕ್ಷಿಕ' ತಾಕುಗಳನ್ನು ಅಭಿವೃದ್ಧಿಪಡಿಸಿದ್ದು ಇದನ್ನು ರೈತರು ತಮ್ಮ ಜಮೀನುಗಳಲ್ಲಿ ಅಳವಡಿಸಿಕೊಳ್ಳಲು ಸಹಕಾರಿಯಾಗಿದೆ. ನಮ್ಮ ಕೆ.ವಿ.ಕೆ ಅಧ್ಯಯನ ಕ್ಷೇತ್ರವನ್ನು ತೋಟಗಾರಿಕಾ ತಾಕು, ಬೀಜೋತ್ಪಾದನಾ ತಾಕು ಮತ್ತು ನರ್ಸರಿ ಸಸ್ಯಪಾಲನ ಘಟಕಗಳಾಗಿ ವಿಭಾಗಿಸಲಾಗಿದೆ. ಮುಖ್ಯವಾಗಿ ಮಾವು, ಸಪೋಟ, ಸೀಬೆ, ಬೆಟ್ಟದ ನೆಲ್ಲಿ, ಸೀತಾಫಲ, ದಾಳಿಂಬೆ ಮುಂತಾದ ಹಣ್ಣಿನ ಸಸಿಗಳನ್ನು ಉತ್ಪಾದಿಸಲು ಸುಮಾರು 25 ಎಕರೆ ಪ್ರದೇಶದಲ್ಲಿ ತಾಯಿ ಗಿಡಗಳ ತಾಕುಗಳನ್ನು ಅಭಿವೃದ್ಧಿಪಡಿಸಲಾಗಿದೆ. ಬೀಜೋತ್ಪಾದನೆಯ ಕ್ಷೇತ್ರದಲ್ಲಿ ಮುಖ್ಯವಾಗಿ ತಿಂಗಳ ಹುರುಳಿ, ಈರುಳ್ಳಿ, ಮೂಲಂಗಿ, ಅಲಸಂದೆ, ಟೊಮ್ಯಾಟೊ ಮತ್ತು ಮೆಣಸಿನಕಾಯಿ ಬೆಳೆಗಳ ಬೀಜೋತ್ಪಾದನೆ ಮಾಡಿ ರೈತರಿಗೆ ಒದಗಿಸಿಕೊಡಲಾಗುತ್ತಿದೆ. ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ಪ್ರದೇಶಕ್ಕೂ ಹನಿ ನೀರಾವರಿ ಅಳವಡಿಸಲಾಗಿದೆ.









## ❖ ಉತ್ಪಾದನಾ / ಸಂಸ್ಕರಣಾ ಘಟಕಗಳು:

❑ **ವಿವಿಧ ಲಘು ಪೋಷಕಾಂಶ ಮಿಶ್ರಣಗಳ ಉತ್ಪಾದನಾ ಘಟಕ:**

ಇತ್ತೀಚಿನ ದಿನಗಳಲ್ಲಿ ಅಧಿಕ ಇಳುವರಿ ಕೊಡುವ ತಳಿಗಳ ಬೇಸಾಯ ಮತ್ತು ಅಧಿಕ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಲಘು ಪೋಷಕಾಂಶಗಳ ಕೊರತೆ ಬಹಳಷ್ಟು ಕಾಡುತ್ತಿದೆ. ಅಧಿಕ ಇಳುವರಿ, ಉತ್ತಮ ಗುಣಮಟ್ಟ ಮತ್ತು ರೋಗ ಸಹಿಷ್ಣುತೆಗೆ ಸಮತೋಲನ ಪೋಷಕಾಂಶಗಳ ನಿರ್ವಹಣೆ ಬಹಳ ಮುಖ್ಯವಾದದ್ದು. ಈ ದಿಸೆಯಲ್ಲಿ ಲಘು ಪೋಷಕಾಂಶಗಳಾದ ಮೆಗ್ನಿಷಿಯಂ, ಸಲ್ಫರ್, ಸತು, ಬೋರಾನ್, ಕಬ್ಬಿಣ, ತಾಮ್ರ, ಮ್ಯಾಂಗನೀಸ್ ಮತ್ತು ಮಾಲ್ಬ್ಡಿಯಂಗಳನ್ನೊಳಗೊಂಡ ಪೋಷಕಾಂಶಗಳನ್ನು ಒದಗಿಸಲು ಸಂಶೋಧನೆಯಂತೆ ಹಸಿರು ಎಲೆಗಳ ಮೇಲೆ ಸಿಂಪಡಿಸಲು ಬೆಳೆ ನಿಗದಿತ ಲಘು ಪೋಷಕಾಂಶಗಳ ಮಿಶ್ರಣಗಳಾದ ಬಾಳೆ ಸ್ಪೆಷಲ್, ತರಕಾರಿ ಸ್ಪೆಷಲ್, ಮಾವು ಸ್ಪೆಷಲ್ ಮತ್ತು ನಿಂಬೆ ಸ್ಪೆಷಲ್‌ಗಳನ್ನು ಉತ್ಪಾದಿಸಿ ರೈತರಿಗೆ ಒದಗಿಸಲಾಗುತ್ತಿದೆ.






❑ **ಮಾವಿನ ಹಣ್ಣಿನ ನೊಣದ ಮೋಹಕ ಬಲೆಯ ಉತ್ಪಾದನ ಘಟಕ:**

ಮಾವಿನಲ್ಲಿ ಇತ್ತೀಚೆಗೆ ಹಣ್ಣಿನ ಹುಳದ ಬಾಧೆ ಹೆಚ್ಚಾಗಿದ್ದು ಇದರ ಹತೋಟಿಗಾಗಿ ಭಾ.ತೋ.ಸಂ.ಸಂಸ್ಥೆ,ಬೆಂಗಳೂರು ಇವರು ಅಭಿವೃದ್ಧಿಪಡಿಸಿರುವಂತಹ ಮೋಹಕ ಬಲೆಗಳನ್ನು ಕೆ.ವಿ.ಕೆ ಆವರಣದಲ್ಲಿ ಉತ್ಪಾದಿಸಿ ಮಾವಿನ ಹಣ್ಣಿನ ನೊಣದ ಹತೋಟಿಗೆ ಸಹಕರಿಸಲಾಗುತ್ತಿದೆ.




❑ **ಅರ್ಕಾ ಜೈವಿಕ ಮಿಶ್ರಣ :**

ತೋಟಗಾರಿಕಾ ಬೆಳೆಗಳ ಉತ್ಪಾದನೆಯಲ್ಲಿ ರೈತರು ಶಿಫಾರಸ್ಸಿಗಿಂತ ಹೆಚ್ಚು ರಸಗೊಬ್ಬರ, ಪೀಡೆನಾಶಕಗಳು ಮತ್ತು ಇನ್ನಿತರ ಅಸಂಪ್ರದಾಯಕ ಪದ್ಧತಿಗಳನ್ನು ಅನುಸರಿಸುತ್ತಿದ್ದು ಮಣ್ಣಿನ ಭೌತಿಕ, ರಾಸಾಯನಿಕ ಮತ್ತು ಜೈವಿಕ ಲಕ್ಷಣಗಳಲ್ಲಿ ಅನೇಕ ಬದಲಾವಣೆಗಳಾಗುತ್ತಿವೆ. ಈ ದಿಸೆಯಲ್ಲಿ ಅರ್ಕಾ ಜೈವಿಕ ಮಿಶ್ರಣ ಎಂಬ ಸೂಕ್ಷ್ಮಾಣು ಜೀವಿಗಳನ್ನೊಳಗೊಂಡ ಗೊಬ್ಬರವನ್ನು ಅಭಿವೃದ್ಧಿಪಡಿಸಿ ರೈತರಿಗೆ ವಿತರಿಸಲಾಗುತ್ತಿದೆ. ಈ ಗೊಬ್ಬರವು ಸಸ್ಯವರ್ಧಕವಾಗಿ ಕೆಲಸ ಮಾಡುವುದಲ್ಲದೆ ಸಾರಜನಕ ಮತ್ತು ರಂಜಕವನ್ನು ಸ್ಥಿರೀಕರಿಸುತ್ತಿದೆ.





- **ಬೇವು ಮತ್ತು ಹೊಂಗೆ ಸೋಪು ಉತ್ಪಾದನಾ ಘಟಕ**

ಕೃಷಿ ಮತ್ತು ವಿವಿಧ ತೋಟಗಾರಿಕಾ ಬೆಳೆಗಳಲ್ಲಿ ಕಂಡುಬರುವ ರಸ ಹೀರುವ ಕೀಟಗಳ ಹತೋಟಿಗೆ ಬೇವು ಮತ್ತು ಹೊಂಗೆ ಸೋಪು ಬಹಳ ಸಹಕಾರಿಯಾಗಿದ್ದು ಮತ್ತು ನೀರಿನಲ್ಲಿ ಸುಲಭವಾಗಿ ಮಿಶ್ರಣ ಮಾಡಬಹುದಾಗಿದೆ. ಜೈವಿಕ ಕೀಟ/ ಪೀಡೆನಾಶಕಗಳಾದ ಅರ್ಕಾ ಜೈವಿಕ ಬೇವು ಸೋಪು ಮತ್ತು ಅರ್ಕಾ ಜೈವಿಕ ಹೊಂಗೆ ಸೋಪುಗಳನ್ನು ಉತ್ಪಾದನೆ ಮಾಡಲಾಗುತ್ತಿದೆ.






## ❑ ಜೈವಿಕ ಉತ್ಪಾದನಾ ಘಟಕ

ಕೆ.ವಿ.ಕೆ ಆವರಣದಲ್ಲಿ ಪರತಂತ್ರ ಜೀವಿ ಉತ್ಪಾದನಾ ಘಟಕ ಆರಂಭಿಸಲಾಗಿದ್ದು, *ಟ್ರೈಕೊಗ್ರಾಮ ಕಿಲೋನಿಸ್* ಎಂಬ ಪರತಂತ್ರ ಜೀವಿಯ ಉತ್ಪಾದನೆಯನ್ನು ಮಾಡಿ ರೈತರಿಗೆ ವಿತರಿಸಲಾಗುತ್ತಿದೆ. ಈ ಪರತಂತ್ರ ಜೀವಿಯು ಬದನೆಗೆ ಬರುವ ರೆಂಬೆ ಮತ್ತು ಕಾಯಿ ಕೊರಕದ ಜೈವಿಕ ಹತೋಟಿಗೆ ತುಂಬ ಸಹಕಾರಿಯಾಗಿದೆ.




## ❑ ಬೀಜೋತ್ಪಾದನಾ ಘಟಕ

ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಬೆಂಗಳೂರು, ಕೃಷಿ ವಿಶ್ವವಿದ್ಯಾನಿಲಯಾಗಳಲ್ಲಿ ಬಿಡುಗಡೆಯಾದ ಅಧಿಕ ಇಳುವರಿ ಕೊಡುವ ತಳಿಗಳ ಬೀಜೋತ್ಪಾದನೆಯುನ್ನು ಕೆ.ವಿ.ಕೆ. ಫಾರಂನಲ್ಲಿ ಮಾಡಲಾಗುತ್ತಿದೆ. ಪ್ರತಿ ವರ್ಷ 3 ಸಾವಿರ ಕೆ.ಜಿ.ಗಿಂತಲೂ ಹೆಚ್ಚು ಬೀಜವನ್ನು ಉತ್ಪಾದಿಸಿ ರಿಯಾಯಿತಿ ದರದಲ್ಲಿ ರೈತರಿಗೆ ವಿತರಿಸಲಾಗುತ್ತಿದೆ.



## ❑ ಬೀಜ ಸಂಸ್ಕರಣಾ ಘಟಕ

ಕೆ.ವಿ.ಕೆ ಆವರಣದಲ್ಲಿ ಬೀಜ ಸಂಸ್ಕರಣಾ ಘಟಕವನ್ನು ತೆರೆಯಲಾಗಿದ್ದು, ಪ್ರತಿ ಗಂಟೆಗೆ ಒಂದು ಟನ್ ಗಿಂತಲೂ ಹೆಚ್ಚು ಬೀಜ ಸಂಸ್ಕರಿಸುವ ಸಾಮರ್ಥ್ಯವನ್ನು ಹೊಂದಿದೆ. ಈ ಘಟಕದ ಮುಖ್ಯ ಧ್ಯೇಯವೆಂದರೆ ರೈತರ ಜಮೀನಿನಲ್ಲಿ ಉತ್ಪಾದನೆಗೊಂಡ ಬೀಜವನ್ನು ಸಂಸ್ಕರಿಸಬಹುದಾಗಿದೆ. ಬೀಜೋತ್ಪಾದನೆ ಕೈಗೊಳ್ಳುವ ರೈತರು ಕೆ.ವಿ.ಕೆಯಲ್ಲಿ ತಮ್ಮ ಹೆಸರನ್ನು ನೊಂದಾಯಿಸಿ ಇದರ ಸದುಪಯೋಗವನ್ನು ಪಡೆದುಕೊಳ್ಳಬಹುದು.



## ❑ ಹಸಿರು ಮತ್ತು ನೆರಳು ಪರದೆ ಮನೆ

ಕೆ.ವಿ.ಕೆ. ಫಾರಂನಲ್ಲಿ ಎರಡು ಹಸಿರು ಮನೆಗಳಲ್ಲಿ 'ಸಂರಕ್ಷಿತ' ಪದ್ಧತಿಯಲ್ಲಿ ಹೂ ಮತ್ತು ತರಕಾರಿ ಬೆಳೆಗಳನ್ನು ಬೆಳೆಯಲಾಗುತ್ತಿದೆ ಹಾಗೂ ಮೂರು ನೆರಳು ಪರದೆ ಮನೆಗಳನ್ನು ನಿರ್ಮಿಸಿದ್ದು ನರ್ಸರಿ ಸಸಿಗಳ ಉತ್ಪಾದನೆಗೆ ಬಳಸಿಕೊಳ್ಳಲಾಗುತ್ತಿದೆ.






## ❑ ಮಾದರಿ ನರ್ಸರಿ

ಕೆ.ವಿ.ಕೆ ಫಾರಂನಲ್ಲಿ ಒಂದು ಎಕರೆ ಪ್ರದೇಶದಲ್ಲಿ ಮಾದರಿ ನರ್ಸರಿ ಸ್ಥಾಪಿಸಿದ್ದು ಇದರಲ್ಲಿ ಹಣ್ಣಿನ ಮತ್ತು ಅಡಿಕೆ ಸಸಿಗಳ ಉತ್ಪಾದನೆಯನ್ನು ಮಾಡಿ ರೈತರಿಗೆ ಸಹಕರಿಸಲಾಗುತ್ತಿದೆ.





## ❑ ಔಷಧಿ ಸಸ್ಯಗಳ ನರ್ಸರಿ

ಔಷಧಿ ಸಸಿಗಳ ಉತ್ಪಾದನೆಗೆ ಉತ್ತೇಜನ ನೀಡಲಾಗಿದ್ದು, ಔಷಧಿ ಸಸ್ಯಗಳಾದ ಬೆಟ್ಟದ ನೆಲ್ಲಿ, ತುಳಸಿ, ಲೋಳೆಸರ ಮುಂತಾದ ಸಸಿಗಳನ್ನು ಉತ್ಪಾದಿಸಿ ವಿತರಿಸಲಾಗುತ್ತಿದೆ.



❑ **ಆಹಾರ ಸಂಸ್ಕರಣಾ ಘಟಕ**

ರೈತರಿಗೆ ನಿಗದಿತ ಆದಾಯವನ್ನು ಹೆಚ್ಚಿಸಲು ಮತ್ತು ವಿವಿಧ ಬೆಳೆಗಳ ಮೌಲ್ಯವರ್ಧನೆಗೆ ಮತ್ತು ಸಂಸ್ಕರಣೆಗೆ ಹೆಚ್ಚು ಆದ್ಯತೆ ನೀಡಲು ಕೆವಿಕೆಯಲ್ಲಿ ತರಬೇತಿ ನೀಡಲಾಗುತ್ತಿದೆ.

❑ **ಬೆಟ್ಟದ ನೆಲ್ಲಿ ಸಂಸ್ಕರಣಾ ಘಟಕ**

ಬೆಟ್ಟದ ನೆಲ್ಲಿಯಲ್ಲಿ ಹಲವಾರು ಮೌಲ್ಯವರ್ಧಿತ ಉತ್ಪನ್ನಗಳಾದ ಜ್ಯೂಸ್, ಕ್ಯಾಂಡಿ, ಸುಫಾರಿ ಮತ್ತು ಮುರಬ್ಬಗಳ ಉತ್ಪಾದನೆಯನ್ನು ತರಬೇತಿ ಮುಖಾಂತರ ಮುಖ್ಯವಾಗಿ ರೈತ ಮಹಿಳೆಯರಿಗೆ, ಯುವಕ – ಯುವತಿಯರಿಗೆ ತಿಳಿಸಿ ಕೊಡಲಾಗುತ್ತಿದೆ.



❑ **ಅಣಬೆ ಬೀಜೋತ್ಪಾದನಾ ಘಟಕ**

ತುಮಕೂರು ಜಿಲ್ಲೆಯ ರೈತರಿಗೆ ಮತ್ತು ರೈತ ಮಹಿಳೆಯರಿಗೆ ಅಣಬೆ ಬೀಜವನ್ನು ಒದಗಿಸುತ್ತಿದ್ದು, ಅಣಬೆ ಬೆಳೆಯನ್ನು ಜಿಲ್ಲೆಯಲ್ಲಿ ಪ್ರೋತ್ಸಾಹಿಸಲಾಗುತ್ತಿದೆ ಹಾಗೂ ಅಣಬೆ ಬೆಳೆದು ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ.



❑ **ಅಡಿಕೆ ತಟ್ಟೆ ಉತ್ಪಾದನಾ ಘಟಕ**

ತುಮಕೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಪ್ರದೇಶದಲ್ಲಿ ಅಡಿಕೆ ಬೆಳೆಯನ್ನು ಬೆಳೆಯಲಾಗುತ್ತಿದ್ದು ಎಲೆಗಳನ್ನು ಬಳಸಿಕೊಂಡು ಪರಿಸರ ಸ್ನೇಹಿ ತಟ್ಟೆಗಳನ್ನು ತಯಾರಿಸಲಾಗುತ್ತಿದೆ ಮತ್ತು ಇದರ ಬಗ್ಗೆ ರೈತರಿಗೆ ತರಬೇತಿಯನ್ನು ನೀಡಲಾಗುತ್ತಿದೆ.



❖ **ಪ್ರಯೋಗಾಲಯಗಳು :**

❑ **ಮಣ್ಣು-ನೀರು ಮತ್ತು ಎಲೆಗಳ ವಿಶ್ಲೇಷಣಾ ಘಟಕ :** ಸುಸಜ್ಜಿತವಾದ ಮಣ್ಣು, ನೀರು ಮತ್ತು ಎಲೆಗಳ ವಿಶ್ಲೇಷಣಾ ಮತ್ತು ಪ್ರಯೋಗಾಲಯವನ್ನು ರೈತರ ಅನುಕೂಲಕ್ಕಾಗಿ ಕೆ.ವಿ.ಕೆ ಆವರಣದಲ್ಲಿ ಸ್ಥಾಪಿಸಲಾಗಿದ್ದು ಬೆಳೆ ನಿರ್ವಹಣೆಗೆ ಬೇಕಾದ ಎಲ್ಲಾ 16 ಪೋಷಕಾಂಶಗಳ ಪರೀಕ್ಷೆಯನ್ನು ಮಾಡಿ ವಿಶ್ಲೇಷಣಾ ವರದಿ ಮತ್ತು ಬೆಳೆ ನಿಗದಿತ ಶಿಫಾರಸ್ಸು ನೀಡಲಾಗುತ್ತಿದೆ. ಪ್ರತಿ ಒಂದು ಮಣ್ಣಿನ ಮಾದರಿ ವಿಶ್ಲೇಷಣೆಗೆ 100 ರೂ. ಹಾಗೂ ಎಲೆ ಮತ್ತು ನೀರಿನ ವಿಶ್ಲೇಷಣೆಗೆ ರೂ. 50 ದರ ನಿಗದಿಸಲಾಗಿದೆ.



❑ **ಸಸ್ಯ ಆರೋಗ್ಯ ಪರೀಕ್ಷಣಾ ಪ್ರಯೋಗಾಲಯ :**

ಸಸ್ಯ ಆರೋಗ್ಯ ಪರೀಕ್ಷಣಾ ಪ್ರಯೋಗಾಲಯವನ್ನು ಕೆ.ವಿ.ಕೆ ಆವರಣದಲ್ಲಿ ಆರಂಭಿಸಲಾಗಿದ್ದು ರೈತರು ತಮ್ಮ ಬೆಳೆಗೆ ಉಂಟಾದ ರೋಗ ಮತ್ತು ಕೀಟಗಳ ಹತೋಟಿಗೆ ಮಾದರಿಗಳನ್ನು ಪ್ರಯೋಗಾಲಯಕ್ಕೆ ತಂದು, ಸೂಕ್ತ ಔಷಧಿ ಶಿಫಾರಸ್ಸು ಮತ್ತು ಪರಿಹಾರವನ್ನು ಪಡೆಯಬಹುದು.



## ಕೃಷಿ ವಿಜ್ಞಾನ ಕೇಂದ್ರದಲ್ಲಿ ದೊರೆಯುವ ಸೌಲಭ್ಯಗಳು :

- **ತರಬೇತಿ ಕಾರ್ಯಕ್ರಮಗಳು :** ಕೆ.ವಿ.ಕೆಯು ರೈತರ ಬೇಡಿಕೆಗಳಿಗನುಸರವಾಗಿ ಹಲವಾರು ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು, ಆಸಕ್ತ ರೈತರು ತಮ್ಮ ಹೆಸರನ್ನು ನೊಂದಾಯಿಸಿಕೊಂಡು ತರಬೇತಿಯ ಸೌಲಭ್ಯವನ್ನು ಪಡೆಯಬಹುದು. ಇದಲ್ಲದೆ ಹಲವಾರು ವೃತ್ತಿಪರ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು, ಮುಖ್ಯವಾಗಿ ಯುವಕ–ಯುವತಿಯರು ಈ ತರಬೇತಿಯ ಲಾಭ ಪಡೆದು ಸ್ವ–ಉದ್ಯೋಗವನ್ನು ಪ್ರಾರಂಭಿಸಬಹುದು.



- **ಕೃಷಿ ವಿಸ್ತರಣಾ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ** ಕೆ.ವಿ.ಕೆಯು ಸಂಘಟಿಸಲ್ಪಡುವ ಎಲ್ಲಾ ರೀತಿಯ ಕೃಷಿ ವಿಸ್ತರಣಾ ಕಾರ್ಯಕ್ರಮಗಳಾದ ಅಧ್ಯಯನ ಪ್ರವಾಸ, ಕ್ಷೇತ್ರ ವೀಕ್ಷಣೆ, ಕ್ಷೇತ್ರೋತ್ಸವಗಳಲ್ಲಿ ರೈತರು ಸಕ್ರೀಯವಾಗಿ ಭಾಗವಹಿಸಬಹುದು.





- **ಕೃಷಿ ತಾಂತ್ರಿಕ ಸಲಹೆಗಳು :** ರೈತರು ಕೆ.ವಿ.ಕೆಗೆ ಭೇಟಿಕೊಟ್ಟು ಕೃಷಿಗೆ ಸಂಬಂಧಿಸಿದಂತೆ ವಿಜ್ಞಾನಿಗಳೊಂದಿಗೆ ಚರ್ಚಿಸಿ ಸೂಕ್ತ ಪರಿಹಾರ ಪಡೆದುಕೊಳ್ಳಬಹುದು.



- **ಕೃಷಿ ಮಾಹಿತಿ ಭಂಡಾರ :** ಕೃಷಿಗೆ ಸಂಬಂಧಿಸಿದ ಹವಾಮಾನ ವರದಿ, ರೋಗ ಮತ್ತು ಕೀಡೆ ನಿರ್ವಹಣೆ ಮತ್ತು ಸರ್ಕಾರದಿಂದ ದೊರೆಯುವ ಕೃಷಿ ಸೌಲಭ್ಯಗಳ ವಿಚಾರ ಕುರಿತು ರೈತರು ತಮ್ಮ ಮೊಬೈಲ್ ಮೂಲಕ ಮಾಹಿತಿ ಪಡೆಯಬಹುದು.
- **ಕೆ.ವಿ.ಕೆಯಲ್ಲಿನ ಇತರೆ ಸೌಲಭ್ಯಗಳು :** ಸರ್ಕಾರಿ ಮತ್ತು ಸಂಘ ಸಂಸ್ಥೆಗಳ ವಿವಿಧ ರೀತಿಯ ತರಬೇತಿ ಮತ್ತು ಉಪನ್ಯಾಸಗಳಿಗೆ ತರಬೇತಿ ಕೇಂದ್ರ ಹಾಗೂ ವಸತಿ ನಿಲಯದ ಸೌಲಭ್ಯಗಳನ್ನು ರಿಯಾಯಿತಿ ದರದಲ್ಲಿ ಉಪಯೋಗಿಸಲು ಅನುವು ಮಾಡಿಕೊಡಲಾಗಿದೆ.
- **ಪ್ರಾತ್ಯಕ್ಷಿಕ ಘಟಕಗಳು :** ಕೆ.ವಿ.ಕೆಯಲ್ಲಿ ಹಲವಾರು ಮಾದರಿ ಪ್ರಾತ್ಯಕ್ಷಿಕ ಘಟಕಗಳನ್ನು ಸ್ಥಾಪಿಸಿದ್ದು, ರೈತರು ಕ್ಷೇತ್ರ ವೀಕ್ಷಣೆ ಮುಖಾಂತರ ಹಲವು ವಿಷಯಗಳನ್ನು ತಿಳಿದು ತಮ್ಮ ಕೃಷಿ ಪದ್ಧತಿಯಲ್ಲಿ ಅಳವಡಿಸಿಕೊಳ್ಳಬಹುದು.
- **ಕೃಷಿ ಕ್ಷೇತ್ರ ವಿಶ್ಲೇಷಣಾ ಸೌಲಭ್ಯ :** ಆಧ್ಯತೆಯ ಮೇರೆಗೆ ಕೆ.ವಿ.ಕೆ ಕೃಷಿ ವಿಜ್ಞಾನಿಗಳು ಸಮಸ್ಯಾತ್ಮಕ ತೋಟಗಳಿಗೆ ಭೇಟಿ ನೀಡಿ ಸೂಕ್ತ ಪರಿಹಾರವನ್ನು ಸೂಚಿಸುತ್ತಾರೆ.



### ಕೆ.ವಿ.ಕೆಯಿಂದ ರೈತರಿಗೆ ರಿಯಾಯಿತಿ ದರದಲ್ಲಿ ದೊರೆಯುವ ಪರಿಕರಗಳು

- ಸುಧಾರಿತ ಆಹಾರ ಧಾನ್ಯ, ದ್ವಿದಳ ಧಾನ್ಯ, ಎಣ್ಣೆ ಕಾಳು, ತರಕಾರಿ, ಮೇವು ಬೆಳೆ ಮತ್ತು ಅಣಬೆ ಬೀಜಗಳು.
- ಕಸಿ ಮಾಡಿದ ವಿವಿಧ ಹಣ್ಣಿನ ಬೆಳೆ ಮತ್ತು ಔಷಧಿ ಸಸ್ಯಗಳು
- ಮೌಲ್ಯವರ್ಧಿತ ಆಹಾರ ಪದಾರ್ಥಗಳು.
- ಲಘು ಪೋಷಕಾಂಶ ಮಿಶ್ರಣಗಳಾದಂತಹ ಬಾಳೆ ಸ್ಪೆಷಲ್, ತರಕಾರಿ ಸ್ಪೆಷಲ್, ಮಾವು ಸ್ಪೆಷಲ್ ಮತ್ತು ಕಿತ್ತಳೆ ಸ್ಪೆಷಲ್‌ಗಳು
- ಜೈವಿಕ ಗೊಬ್ಬರಗಳಾದ ಅರ್ಕಾ ಜೈವಿಕ ಮಾವಿನ ಗೊಬ್ಬರ
- ಮಾವಿನ ನೊಣದ ಮೋಹಕ ಬಲೆಗಳು ಮತ್ತು ಮಾವಿನಕಾಂಡ ಕೊರೆಯುವ ಹತೋಟಿಗೆ ಹೀಲರ್ ಕಮ್ ಸೀಲರ್ ಮಿಶ್ರಣ.
- ಬೇವಿನ ಸೋಪು ಮತ್ತು ಹೊಂಗೆ ಸೋಪು
- ಜೈವಿಕ ಹತೋಟಿಗೆ ಟ್ರೈಕೋ–ಕಾರ್ಡ್

# ಸಿಬ್ಬಂದಿ ವಿವರ

| ಸಿಬ್ಬಂದಿಯ ಹೆಸರು | ಪದನಾಮ | ವಿಷಯ |
|---|---|---|
| 1. ಡಾ. ಎನ್. ಲೋಗಾನಂದನ್ | ಕಾರ್ಯಕ್ರಮ ಸಂಯೋಜಕರು | ಕೃಷಿ ವಿಸ್ತರಣೆ |
| 2. ಶ್ರೀ ಕೆ.ಎನ್. ಜಗದೀಶ್ | ವಿಷಯ ತಜ್ಞರು | ಕೃಷಿ ವಿಸ್ತರಣೆ |
| 3. ಶ್ರೀ ಪಿ.ಆರ್. ರಮೇಶ್ | ವಿಷಯ ತಜ್ಞರು | ಮಣ್ಣು ವಿಜ್ಞಾನ |
| 4. ಶ್ರೀ ಜೆ.ಎಮ್. ಪ್ರಶಾಂತ್ | ವಿಷಯ ತಜ್ಞರು | ತೋಟಗಾರಿಕೆ |
| 5. ಶ್ರೀ ಬಿ.ಹನುಮಂತೇಗೌಡ | ವಿಷಯ ತಜ್ಞರು | ಸಸ್ಯ ಸಂರಕ್ಷಣೆ |
| 6. ಶ್ರೀಮತಿ ರಾಧಾ ಬಣಾಕರ | ವಿಷಯ ತಜ್ಞರು | ಗೃಹ ವಿಜ್ಞಾನ |
| 7. ಡಾ. ಸೋಮಶೇಖರ್ | ವಿಷಯ ತಜ್ಞರು | ಸಸ್ಯ ತಳಿ ಅಭಿವೃದ್ಧಿ |
| 8. ಶ್ರೀ ಎಚ್.ಡಿ. ಪರಶುರಾಮ್ | ಕ್ಷೇತ್ರ ವ್ಯವಸ್ಥಾಪಕರು | ತೋಟಗಾರಿಕೆ |
| 9. ಕು. ಜ್ಯೋತಿ ಅಪ್ಪು ನಾಯ್ಕ | ಕಾರ್ಯಕ್ರಮ ಸಹಾಯಕರು (ಗಣಕಯಂತ್ರ) | ಮಾಹಿತಿ ತಂತ್ರಜ್ಞಾನ |
| 10. ಶ್ರೀ ಕೆ.ಎನ್. ಶಶಿಧರ | ಕಾರ್ಯಕ್ರಮ ಸಹಾಯಕರು | ಬೆಳೆ ಶರೀರ ಕ್ರಿಯಾ ಶಾಸ್ತ್ರ |
| 11. ಶ್ರೀಮತಿ ವೇದಾ ಕುರ್ನಾಲಿ | ಶೀಘ್ರಲಿಪಿಗಾರರು | |
| 12. ಶ್ರೀ ಎಮ್.ಎಚ್. ನಿಂಗಪ್ಪ | ಚಾಲಕ | ಟ್ರಾಕ್ಟರ್ |
| 13. ಶ್ರೀ ಹೇಮಂತ್ ಕುಮಾರ್ | ಚಾಲಕ | ಜೀಪ್ |
| 14. ಶ್ರೀ ಜಿ. ಮಂಜಣ್ಣ | ಸೇವಾ ಸಿಬ್ಬಂದಿ | |

## ಕೆ.ವಿ.ಕೆ., ಹಿರೇಹಳ್ಳಿಯಲ್ಲಿ ದೊರೆಯುವ ಸೌಲಭ್ಯ ಮತ್ತು ಪರಿಕರಗಳು

| ಕ್ರ. ಸಂ. | ವಿವರ | ದರ ರೂ. (ಪ್ರತಿ ಕೆ.ಜಿ.) | ಕ್ರ. ಸಂ. | ವಿವರ | ದರ ರೂ. (ಪ್ರತಿ ಕೆ.ಜಿ.) |
|---|---|---|---|---|---|
| 1. | **ಬಿತ್ತನೆ ಬೀಜಗಳು** | | | ನುಗ್ಗೆ ಸಸಿಗಳು | 10 |
| | ರಾಗಿ(ಎಂ.ಎಲ್–365) | 40 | 3. | ಅಣಬೆ ಬೀಜ (ಒಯ್ಸ್ಟರ್/ಮಿಲ್ಕಿ) | 60 |
| | ಮೆಣಸಿನಕಾಯಿ ಬೀಜ | 1500 | 4. | ಅಣಬೆ (ಒಯ್ಸ್ಟರ್) | 100 |
| | ಟೊಮ್ಯಾಟೊ | 2000 | 5. | ಹಣ್ಣಿನ ಮೋಹಕ ಬಲೆ | |
| | ಬದನೆ | 1750 | | (ಮಾವು,ಸೀಬೆ) | 100/ಬಾಕ್ಸ್ |
| | ತಿಂಗಳ ಹುರುಳಿ | 250 | 6. | ಬಾಳೆ ಸ್ಪೆಷಲ್ | 150 |
| | ಅಲಸಂದೆ | 300 | 7. | ಮಾವು ಸ್ಪೆಷಲ್ | 150 |
| | ಬೆಂಡಿ | 500 | 8. | ನಿಂಬೆ ಸ್ಪೆಷಲ್ | 150 |
| | ಸೊಪ್ಪು– ದಂಟು | 400 | 9. | ತರಕಾರಿ ಸ್ಪೆಷಲ್ | 150 |
| | ಕುಂಬಳಕಾಯಿ | 1000 | 10. | ಅರ್ಕಾ ಜೈವಿಕ ಗೊಬ್ಬರ | 75 |
| | ಹೀರೆಕಾಯಿ | 750 | 11. | ಮೈಕೋರೈಜಾ | 60 |
| | ನುಗ್ಗೆಕಾಯಿ | 2500 | 12. | ಹೊಂಗೆ ಸೋಪು | 125 |
| | ಪಪ್ಪಾಯ | 100000 | 13. | ಬೇವಿನ ಸೋಪು | 150 |
| 2. | **ಸಸಿಗಳು** | ಪ್ರತಿ ಗಿಡಕ್ಕೆ | 14. | ಹೀಲರ್ ಕಮ್ ಸೀಲರ್ | 100 |
| | ಅಡಿಕೆ | 20 | 15. | ಬೆಟ್ಟದ ನೆಲ್ಲಿ ಕ್ಯಾಂಡಿ | 250 |
| | ಬೆಟ್ಟದ ನೆಲ್ಲಿ | 40 | 16. | ಬೆಟ್ಟದ ನೆಲ್ಲಿ ಸ್ಕ್ವಾಷ್ | 100/ಲೀ |
| | ತೆಂಗು | 80 | 17. | ಬೆಟ್ಟದ ನೆಲ್ಲಿ ಸುಫಾರಿ | 250 |
| | ತುಳಸಿ | 10 | 18. | ರಾಗಿ ಮಾಲ್ಟ್ | 150 |
| | ಅಲೊವೆರಾ | 10 | 19. | ಮಣ್ಣಿನ ವಿಶ್ಲೇಷಣೆ | 100 |
| | ಸ್ಟಿವಿಯಾ | 10 | 20. | ನೀರಿನ ವಿಶ್ಲೇಷಣೆ | 50 |
| | ಹಣ್ಣಿನ ಸಸಿಗಳು | 40 | 21. | ಎಲೆಯ ವಿಶ್ಲೇಷಣೆ | 50 |

ವಿಳಾಸ:
ಕಾರ್ಯಕ್ರಮ ಸಂಯೋಜಕರು
ಕೃಷಿ ವಿಜ್ಞಾನ ಕೇಂದ್ರ, ಹಿರೇಹಳ್ಳಿ, ತುಮಕೂರು-572168
ದೂರವಾಣಿ ಸಂಖ್ಯೆ: 0816-2243175 ಫ್ಯಾಕ್ಸ್ ನಂ : 0816-2243177
ಮಿಂಚಂಚೆ : iihrkvk@gmail.com ಅಂತರ್ಜಾಲ ತಾಣ : www.iihrkvk.org